## ಚತುರ ಕಂಡಕ್ಟರ್!



ಪ್ರಯಾಣಿಕರಿಂದ ತುಂಬಿದ್ದ ಬಸ್, ಇನ್ನೇನು ಹೊರಡುವುದರಲ್ಲಿತ್ತು. ಅಷ್ಟರಲ್ಲಿ ಲಗುಬಗೆಯಿಂದ ಇಬ್ಬರು ಯುವತಿಯರು ಬಸ್ ಏರಿ ಒಳಗೆ ಬಂದರು. 'ಮಹಿಳೆಯರಿಗಾಗಿ' ಮೀಸಲಿದ್ದ ಒಂದೇ ಒಂದು ಸೀಟು ಖಾಲಿ ಇತ್ತು. ಅದನ್ನು ಕಂಡ ಈ ಯುವತಿಯರು, 'ಏಯ್... ನಾ ಮೊದ್ಲು ನೋಡಿದೆ... ನಾ ನೋಡಿದೆ...' ಎಂದು ಅಲ್ಲಿ ಕುಳಿತುಕೊಳ್ಳಲು ಜಗಳ ಶುರುಮಾಡಿದರು. ಅವರ ಬಳಿ ಬಂದ ಕಂಡಕ್ಟರ್, 'ಯಾಕ್ ಹೀಗೆ ಕಚ್ಚಾಡ್ತೀರೀ? ನಿಮ್ಮಲ್ಲಿ ಯಾರಿಗೆ ಹೆಚ್ಚು ವಯಸ್ಸಾಗಿದೆಯೊ ಅವ್ರು ಕೂತ್ಕೊಂಡ್ರೆ ಆಯ್ತಪ್ಪಾ' ಎಂದು ಹೇಳಿದ್ದೇ ತಡ, ಆ ಯುವತಿಯರು, 'ಅಕ್ಕಾ, ನೀವು ಕೂತ್ಕೊಳ್ಳಿ, ಅಕ್ಕಾ ನೀವು ಕೂತ್ಕೊಳ್ಳಿ' ಎಂದು ಹೇಳಲಾರಂಭಿಸಿದರು. ಪ್ರಯಾಣಿಕರು ಕಂಡಕ್ಟರ್‌ನ ಚತುರತೆಯನ್ನು ಕೊಂಡಾಡತೊಡಗಿದರು.

**ಅರವಿಂದ ಜಿ. ಜೋಷಿ**

---

## ಒಂದು ಕಾಪಿಗೆ...

ಚಳಿಗಾಲದ ಒಂದು ಸಂಜೆ ಗೋಪಿ ಪೇಟೆಗೆ ಹೋಗಿದ್ದ. ಸಂತೆ ಮುಗಿಸಿಕೊಂಡು ಮನೆಗೆ ಹಿಂದಿರುಗುವಾಗ ಅವನಿಗೆ ಬಿಸಿಬಿಸಿಯಾಗಿ ಒಂದು ಕಾಫಿ ಕುಡಿಯಬೇಕೆನಿಸಿತು. ಪಕ್ಕದಲ್ಲಿಯೇ ಹೊಸ ಹೋಟೆಲ್‌ನ ಬೋರ್ಡ್ ನೋಡಿದ. 'ಒಂದು ಕಾಪಿಗೆ ಎರಡು ರೂಪಾಯಿ' ಎಂದಿತ್ತು. ಖುಷಿಯಾಗಿ ಒಳಗೆ ಹೋಗಿ ಬಿಸಿಬಿಸಿ ಕಾಫಿ ಕುಡಿದ. ಸಪ್ಲಾಯರ್ ಅವನಿಗೆ 30 ರೂಪಾಯಿ ಬಿಲ್ ತಂದುಕೊಟ್ಟ. ಗೋಪಿ ಕೋಪಗೊಂಡು, 'ಏನೊ? ಒಂದು ಕಾಫಿಗೆ ಎರಡು ರೂಪಾಯಿ ಅಂತ ಬೋರ್ಡ್ ಹಾಕಿ, 30 ರೂಪಾಯಿ ಬಿಲ್ ತಂದು ಕೊಡ್ತಿಯಾ?' ಎಂದು ರೇಗಿದ. ಸಪ್ಲಾಯರ್, 'ಸರಿಯಾಗಿ ನೋಡಿಕೊಂಡು ಬರಬೇಕು ಸ್ವಾಮಿ, ಅದು ಪಕ್ಕದ ಅಂಗಡಿಯ ಝೆರಾಕ್ಸ್ ಬೋರ್ಡು– ಒಂದು ಕಾಪಿಗೆ ಎರಡು ರೂಪಾಯಿ' ಎಂದುತ್ತರಿಸಿದ.




**ನರಸಿಂಹ ಪೈ**